ನೇರವಾಗಿ ಅಖಾಡಕ್ಕೆ ಇಳಿದ್ದಾನೆ.

ಕಿರಣನಿಗೆ ಬಲೆಗೆ ಬಿದ್ದುದು ಅರಿವಾಗಿದೆ. ಚಾಲಾಕಿತನ ನೋಡಿ! ಆತ ಹಾಕುತ್ತಿರುವುದು ಧಮಕಿಯಾದರೂ ಅದನ್ನು ಆತ ತೀರಾ ಬಿರುಸಾಗಿ ಹೇಳುತ್ತಿಲ್ಲ. ಧ್ವನಿ ಎತ್ತರಿಸದಂತೆ, ಹೆಚ್ಚು ದೂರಕ್ಕೆ ಕೇಳದಂತೆ ತಣ್ಣಗಿನ ದನಿಯಲ್ಲಿ ಮಾತನಾಡುತ್ತಿದ್ದಾನೆ. ನೋಡಿದರೆ ಯಾರೋ ಪರಿಚಿತರು ಸಲುಗೆಯಿಂದ ಮಾತನಾಡಿಕೊಳ್ಳುತ್ತಿದ್ದಾರೆ ಅನಿಸಬೇಕು. ಹಾಗಾಗಿ ಯಾರಿಗೂ ಅನುಮಾನ ಮೂಡುತ್ತಿಲ್ಲ. ಶಕ್ತಿ ಮೀರಿ ತಾನು ಸಹಾಯಕ್ಕೆ ಕೂಗಬಹುದು, ಇತರರ ಗಮನ ಸೆಳೆಯುವ ಪ್ರಯತ್ನ ಮಾಡಬಹುದು. ಆದರೆ ಅದು ಎಷ್ಟರ ಮಟ್ಟಿಗೆ ಫಲಿಸೀತು ಎನ್ನುವ ಗ್ಯಾರಂಟಿಯಿಲ್ಲ. ಇವನ ಬಳಿ ಯಾವುದಾದರೂ ಆಯುಧವಿದ್ದರೆ?... ತಕ್ಷಣ ಅದನ್ನು ತನ್ನ ಮೇಲೆ ಪ್ರಯೋಗಿಸಿದರೆ? ಇಷ್ಟು ಜಾಗ್ರತೆ ವಹಿಸಿ ಬಲೆ ಹೆಣೆದವನು ತಕ್ಕ ತಯಾರಿಯಿಲ್ಲದೆ ಹಾಗೇ ಬರಿಗೈಲಿ ಬಂದಿರುತ್ತಾನಾ? ಊಹೂಂ... ಸುಮ್ಮನೆ ಯಾಕೆ ರಿಸ್ಕು? ಏನಾದ್ರೂ ಆದನಂತರ ಪರಿತಪಿಸುವುದಕ್ಕಿಂತ ಸುಮ್ಮನಿರುವುದು ಲೇಸು. ಜೀವ ಎಲ್ಲಕ್ಕಿಂತ ದೊಡ್ಡದಲ್ಲವೇ... ಅಂದುಕೊಂಡು ಧೈರ್ಯ ಮಾಡದೆ ಸುಮ್ಮನಾಗಿದ್ದಾನೆ.

ಹೀಗೇ ಅರ್ಧ ಗಂಟೆಗೂ ಮಿಕ್ಕಿ ಆತ ಸತಾಯಿಸಿದ್ದಾನೆ. ಮಧ್ಯೆ ಮಾತಿನ ವರಸೆಗಳು ಬೇರೆ.

